# 11

# ನಿತ್ಯಬಹುಮಾನ ಮತ್ತು ಶಿಕ್ಷೆ

ಗ್ರಹಿಸಿಕೊಳ್ಳಲಿಕ್ಕೆ ನಮ್ಮ ಮನಸ್ಸುಗಳಿಗೆ ಅತೀ ಕಠಿಣವಾದ ತತ್ವಗಳಲ್ಲಿ ಒಂದು "ನಿತ್ಯತ್ವ," ಎಂದೂ ಅಂತ್ಯಗೊಳ್ಳದ ಅಸ್ತಿತ್ವ. ನಮ್ಮ ಭೌತಿಕ ವಿಶ್ವದಲ್ಲಿಯ ಪ್ರತಿಯೊಂದಕ್ಕೆ, ನಾವು ನೋಡುವಂಥದ್ದು ಮತ್ತು ಸ್ಪರ್ಶಿಸುವಂಥದ್ದಕ್ಕೆ ಒಂದು ಪ್ರಾರಂಭವಿತ್ತು ಹಾಗೂ ಒಂದು ಅಂತ್ಯವಿರುವುದು; ಆದುದರಿಂದ, ನಿತ್ಯತ್ವದ ತತ್ವದೊಂದಿಗೆ ಹೋರಾಡುವುದು ಮಿತಿಮೀರಿದ್ದಾಗಿರುವುದು, ನಿತ್ಯತ್ವವು ನಮ್ಮ ಹೊರಗಿರುವ ಅನುಭವವಾಗಿರುವದರಿಂದ ಅದನ್ನು ಅರ್ಥಮಾಡಿಕೊಳ್ಳುವುದು ನಮ್ಮ ಮನಸ್ಸುಗಳಿಗೆ ಅತಿಯಾಗಿ ಅಸಾಧ್ಯವಾದದ್ದಾಗಿರುತ್ತದೆ.

ಈ ಅಲ್ಪ ಜೀವನದಲ್ಲಿ ನಾವು ಮಾಡಿದ್ದು ನಿತ್ಯತ್ವದಲ್ಲೆಲ್ಲಾ ಇರುವದಕ್ಕೆ ನಾವು ಹಕ್ಕನ್ನು ಪಡೆದು ಕೊಳ್ಳಲು ಶಕ್ತರನ್ನಾಗಿ ಮಾಡಲಾರದು ಎಂದು ನಾವು ಅರ್ಥಮಾಡಿಕೊಂಡರೂ, ಅದ್ಭುತಗಳೊಂದಿಗೆ ದೇವರು ನಮಗೆ ಪರಲೋಕವನ್ನು ಕೊಡುವದನ್ನು ಕೂಡಲೇ ಒಪ್ಪಿಕೊಳ್ಳುತ್ತೇವೆ. ಅದೇ ಸಮಯದಲ್ಲಿ, ನಾವು ಈ ಲೋಕದಲ್ಲಿ ಅಲ್ಪ ಜೀವನದಲ್ಲಿ ಮಾಡಿದ್ದಕ್ಕೆ ಎಂದೂ ತೀರದ ಶಿಕ್ಷೆಯನ್ನು ಹೊಂದಲಿಕ್ಕೆ ಅರ್ಹರಲ್ಲ ಎಂದು ಯೋಚಿಸುತ್ತ, ನರಕದ ಭಯಾನಕತೆಗಳಿಗೆ ನಾವು ಆಕ್ಷೇಪಿಸ ಬಹುದು. ಅನೀತಿವಂತರು ಆತನ ಪ್ರತೀಕಾರವನ್ನು ಹೊಂದುದಕ್ಕೆ ಅರ್ಹರಾಗುವದಕ್ಕಿಂತ ಹೆಚ್ಚಾಗಿ ನೀತಿವಂತರು ದೇವರ ದಯೆ ಮತ್ತು ಕೃಪೆಗೆ ಅರ್ಹರಾಗಿರುವರು ಎಂದು ನಾವು ಯೋಚಿಸಬಹುದು.

## ಮನುಷ್ಯನ ದೃಷ್ಟಿಕೋನ

ಈ ಕ್ಷೇತ್ರದಲ್ಲಿ ಮನುಷ್ಯನ ಆಸಕ್ತಿ ಮತ್ತು ತಿಳುವಳಿಕೆಯ ಕೊರತೆಯು ಮರಣಾನಂತರ ಶಿಕ್ಷೆಯ ಬಗ್ಗೆ ನಾಲ್ಕು ಪ್ರಮುಖ ದೃಷ್ಟಿ ಕೋನಗಳಗೆ ನಡಿಸಿದೆ:

ಮೊದಲನೆಯದು, ದೇವರು, ಪ್ರೀತಿಯ ಮತ್ತು ದಯೆಯ ದೇವರಾಗಿರುವದರಿಂದ, ಅಂತಿಮವಾಗಿ ಎಲ್ಲಾ ಜನರಿಗೆ, ಅವರು ಭೂಲೋಕದ ಮೇಲಿನ ಜೀವನಗಳು ಯಾವುದೇ ರೀತಿಯಲ್ಲಿದ್ದರೂ ವ್ಯತ್ಯಾಸ ಮಾಡದೇ, ಪರಲೋಕದಲ್ಲಿ ನಿತ್ಯಜೀವವನ್ನು ಅನುಗ್ರಹಿಸುವನು ಎಂದು ಯುನಿವರ್ಸಲಿಸ್ಟರು ಅಭಿಪ್ರಾಯ ಪಡುತ್ತಾರೆ. ಯಾವುದೇ ರೀತಿಯ ಶಿಕ್ಷೆಯು ಸಂಭವಿಸುವದಿಲ್ಲ ಎಂದು ಕೆಲವರು ಹೇಳುತ್ತಾರೆ, ಇನ್ನು ಕೆಲವರು ಕೆಲವು ಕಾಲದ ಶಿಕ್ಷೆಯಲ್ಲಿ ನಂಬುತ್ತಾರೆ. ಇಂಥ ಭಿನ್ನತೆಗಳಿದ್ದರೂ ಪ್ರತಿಯೊಬ್ಬರೂ ಅಂತಿಮವಾಗಿ ಪರಲೋಕಕ್ಕೆ ಹೋಗುವರು ಎಂದು ಯುನಿವರ್ಸಲಿಸ್ಟರು ನಂಬುತ್ತಾರೆ.

ಎರಡನೆಯದು, ಸರ್ವನಾಶನದಲ್ಲಿ ನಂಬಿಕೆಯಿಡುವವರು, ಅಂತಿಮ ನ್ಯಾಯ ತೀರ್ವಿಕೆಯ ನಂತರ ದುಷ್ಟರು ಅಸ್ತಿತ್ವದಲ್ಲಿ ಇರುವದಿಲ್ಲವೆಂದು ನಂಬುತ್ತಾರೆ. (1) ಸತ್ತು ಹೋದ ದುಷ್ಟರು ಎಂದೂ ಎಬ್ಬಿಸಲ್ಪಡುವದಿಲ್ಲ ಹಾಗೂ ಜೀವಿಸುವ ದುಷ್ಟರು ನಾಶಗೊಳಿಸಲ್ಪಡುವರು ಎಂದು ಕೆಲವರು ನಂಬುತ್ತಾರೆ. (2) ಎಲ್ಲರೂ ಎಬ್ಬಿಸಲ್ಪಟ್ಟ ನಂತರ, ಎಲ್ಲಾ ದುಷ್ಟರೂ - ಸತ್ತವರೂ ಜೀವಿಸುವವರೂ ನಾಶಪಡಿಸಲ್ಪಡುವರು ಎಂದು ಕೆಲವರು ಯೋಚಿಸುತ್ತಾರೆ. (3) ಎಲ್ಲಾ ದುಷ್ಟರು ಎಬ್ಬಿಸಲ್ಪಡುವರು ಮತ್ತು

ಸತ್ಯವನ್ನು ಕಲಿತುಕೊಳ್ಳಲಿಕ್ಕೆ ಅವಕಾಶ ಕೊಡಲ್ಪಡುವರು ಎಂದು ಕೆಲವರು ನಂಬುತ್ತಾರೆ. ಆಗ ಅವರಲ್ಲಿರುವವರು ಮತ್ತು ಸತ್ಯವನ್ನು ತಿರಸ್ಕರಿಸುವ ಜೀವಿತರು ನಾಶಗೊಳಿಸಲ್ಪಡುವರು. (4) ಇನ್ನೂ ಇತರರು ಸತ್ತು ಹೋದ ದುಷ್ಟರು ಸತ್ಯವನ್ನು ಕಲಿತು ಕೊಳ್ಳಲು ಅವಕಾಶವಿಲ್ಲದಿದ್ದವರು ಮಾತ್ರವೇ ಎಬ್ಬಿಸಲ್ಪಡುವರು ಮತ್ತು ಅವಕಾಶ ಕೊಡಲ್ಪಡುವರು ಎಂದು ನಂಬುತ್ತಾರೆ. ಅವರು ಸತ್ಯವನ್ನು ತಿರಸ್ಕರಿಸಿದರೆ, ಸತ್ಯವನ್ನು ಸ್ವೀಕರಿಸದೇ ಇದ್ದ ಜೀವಿತರೊಂದಿಗೆ ಅವರು ನಾಶಗೊಳಿಸಲ್ಪಡುವರು.

ಮೂರನೆಯದು, ಸತ್ಯವನ್ನು ತಿರಸ್ಕರಿಸಿದವರಿಗಾಗಿ ಅಂತ್ಯವಿಲ್ಲದ ಶಿಕ್ಷೆಯಲ್ಲಿ ಅನೇಕರು ನಂಬುತ್ತಾರೆ. ಇನ್ನು ಕೆಲವರು, ಅಕ್ಷರಶಃವಾದ ಪ್ರಾಕೃತಿಕವಾದ ಬೆಂಕಿಯು ದುಷ್ಟರನ್ನು ಸದಾಕಾಲವೂ ಯಾತನೆ ಪಡಿಸುವುದೆಂದು ನಂಬಿದರೆ, ಇತರರು ದುಷ್ಟರು ಸಹಿಸುವ ನೋವಿನ ರೀತಿಯನ್ನು ವಿವರಿಸಲು ಬೆಂಕಿಯು ಉಪಯೋಗಿಸಲ್ಪಟ್ಟಿದೆ ಎಂದು ಯೋಚಿಸುತ್ತಾರೆ. ಶಿಕ್ಷೆಯ ಪ್ರಮಾಣವು ಒಬ್ಬನ ಪಾಪದ ಒತ್ತಡದ ಮೇಲೆ ಅವಲಂಭಿಸಿರುವುದೆಂದು ಕೆಲವರು ಕಲ್ಪಿಸುತ್ತಾರೆ. ಸತ್ಯವನ್ನು ತಿಳಿದು ಕೊಳ್ಳಲು ಅವಕಾಶವಿಲ್ಲದವರಿಗೆ ಹೆಚ್ಚು ರಿಯಾಯಿತಿ ಕೊಡಲ್ಪಡುವುದೆಂದು ಹೇಳುತ್ತಾರೆ.

ನಾಲ್ಕನೆಯದು, ಕೃಪೆಯ ಸ್ಥಿತಿಯಲ್ಲಿ ಸಾಯುವವರು ಆದರೆ ತಮ್ಮ ಪಾಪಗಳಿಗಾಗಿ ಸಾಕಷ್ಟು ಶಿಕ್ಷೆ ಸಹಿಸದವರು, ಪರ್ಗೇಟರಿ ಎಂಬ ಸ್ಥಳದಿಂದ ಪರಲೋಕಕ್ಕೆ ಹೋಗಲು ಬಿಡುಗಡೆಯಾಗುವ ವರೆಗೆ ಪರ್ಗೇಟರಿಯಲ್ಲಿ ಯಾತನೆ ಅನುಭವಿಸುವರು ಎಂದು ಕೆಲವರು ನಂಬುತ್ತಾರೆ. ಪರ್ಗೇಟರಿಯಲ್ಲಿ ಅವರ ಸಮಯವು ಭೂಲೋಕದ ಮೇಲೆ ಅವರು ಜೀವಿಸಿದ ರೀತಿಯ ಜೀವನದ ಮೇಲೆ ಮತ್ತು ಮಾಸ್‌ಗಳ, ಪ್ರಾರ್ಥನೆಗಳ, ಒಳ್ಳೇ ಕಾರ್ಯಗಳ ಮತ್ತು ಅವರ ಪರವಾಗಿ ಇತರರ ಶ್ರಮೆಗಳ ಮುಖಾಂತರ ಹೊಂದಿದ ಸಹಾಯದ ಮೇಲೆ ಅವಲಂಭಿಸಿ ತೀರ್ಮಾನಿಸಲ್ಪಡುವುದು ಎಂದು ಹೇಳಲ್ಪಟ್ಟಿದೆ.

ನಿತ್ಯ ಶಿಕ್ಷೆಯು ದೇವರ ಪ್ರೀತಿ, ದಯೆ ಮತ್ತು ಕೃಪೆಯೊಂದಿಗೆ ಸಾಮರಸ್ಯದಲ್ಲಿರ ಬಾರದೆಂದು ಕೆಲವರು ನಿರ್ಣಯಿಸುತ್ತಾರೆ. ಆದುದರಿಂದ, ಅವರು ಬೈಬಲನ್ನು ಕೇವಲ ಪ್ರೀತಿ, ದಯೆ ಮತ್ತು ತಾಳ್ಮೆಯಿರುವಾತನೊಂದಿಗೆ ಹೊಂದಾಣಿಕೆಯಲ್ಲಿರುವಂತೆ ವ್ಯಾಖ್ಯಾನಿಸಲು ನೋಡುತ್ತಾರೆ (1 ತಿಮೊಥೆ 1:2; 1 ಯೋಹಾನ 4:8). ದೇವರ ಇನ್ನೊಂದು ಭಾಗವನ್ನು ಅವರು ಕಡೆಗಣಿಸುತ್ತಾರೆ; ಆತನು ರೋಷದ ಮತ್ತು ಪ್ರತೀಕಾರದ ದೇವರಾಗಿದ್ದಾನೆ.[1] ಆತನು ಅಧರ್ಮವನ್ನು ದ್ವೇಷಿಸುತ್ತಾನೆ (ಇಬ್ರಿಯ 1:9), "ಕಾಠಿಣ್ಯತೆಯನ್ನು" ತೋರಿಸುತ್ತಾನೆ (ರೋಮಾಪುರ 11:22), ಮತ್ತು "ದಹಿಸುವ ಅಗ್ನಿಯಾಗಿದ್ದಾನೆ" (ಇಬ್ರಿಯ 12:29), "ಆದುದರಿಂದ ದೇವರ ದಯೆಯನ್ನೂ ಕಾಠಿಣ್ಯವನ್ನೂ ನೋಡು; ಬಿದ್ದವರ ಕಡೆಗೆ ಕಾಠಿಣ್ಯ; ನಿನ್ನ ಕಡೆಗೆ ನೀನು ದೇವರ ದಯೆಯನ್ನು ಆಶ್ರಯಿಸಿಕೊಂಡೇ ಇದ್ದರೇ ಆತನ ದಯೆ; ಇಲ್ಲವಾದರೆ ನಿನ್ನನ್ನೂ ಕಡಿದು ಹಾಕುವನು" (ರೋಮಾಪುರ 11:22) ಎಂದು ನಾವು ಓದುತ್ತೇವೆ. "ಜೀವ ಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿ ಬೀಳುವುದು ಭಯಂಕರವಾದದ್ದು" ಎಂದು ಇಬ್ರಿಯ 10:31 ಹೇಳುತ್ತದೆ.

ದೇವರು ದಯೆ ಮತ್ತು ಕಠಿಣತೆ ಎರಡೂ ಉಳ್ಳವನಾಗಿದ್ದಾನೆ. ತನಗೆ ವಿಧೇಯರಾಗುವವರನ್ನು ದಯೆಯಿಂದ ನಡಿಸಿಕೊಳ್ಳುತ್ತಾನೆ. ಆದರೆ ಆತನ ಚಿತ್ತಕ್ಕೆ ವಿರುದ್ಧವಾಗಿ ದಂಗೆಯೇಳುವವರನ್ನು ಕಠಿಣವಾಗಿ ಶಿಕ್ಷಿಸುತ್ತಾನೆ (ಧರ್ಮೋಪದೇಶ ಕಾಂಡ 5:9, 10). ಆತನ ದಯೆಯು ಮತ್ತು ಉಗ್ರತೆಯು ಹಳೇ ಮತ್ತು ಹೊಸ ಒಡಂಬಡಿಕೆ ಎರಡರಲ್ಲಿಯೂ ಕಂಡು ಬರುತ್ತವೆ. ಉದಾಹರಣೆಯಾಗಿ, ದಾವೀದನಿಗೆ ಆತನ ದಯೆಯಲ್ಲಿ ಕಾಣುವಂತೆ ದಯೆಯುಳ್ಳ ದೇವರನ್ನು ಹಳೇ ಒಡಂಬಡಿಕೆಯು

ಪ್ರಕಟಿಸುತ್ತದೆ. ಧರ್ಮಶಾಸ್ತ್ರಕ್ಕನುಗುಣವಾಗಿ, ದಾವೀದನು ಬತ್ಸೇಬಳೊಂದಿಗೆ ಪಾಪಮಾಡಿದ್ದಕ್ಕಾಗಿ ಮತ್ತು ಊರೀಯನ ಕೊಲೆ ಮಾಡಿಸಿದ್ದಕ್ಕಾಗಿ ಮರಣ ದಂಡನೆ ಹೊಂದಬೇಕಾಗಿತ್ತು (ಯಾಜಕಕಾಂಡ 20:10; ಅರಣ್ಯಕಾಂಡ 35:30). ಆದರೂ ದೇವರು ಅವನಿಗೆ ದಯೆ ತೋರಿಸಿದನು ಮತ್ತು ಅವನ ಪಾಪವನ್ನು ಕ್ಷಮಿಸಿದನು, ಯಾಕಂದರೆ ಅವನು ದೇವರನ್ನು ಪ್ರೀತಿಸಿದನು ಮತ್ತು ದೇವರು ಅವನನ್ನು ಪ್ರೀತಿಸಿದನು (2 ಸಮುವೇಲ 12:13). ನೋಹನ ದಿನದಲ್ಲಿಯ ಜಗತ್ತಿನ ದುಷ್ಟರನ್ನು ಉಳಿಸದಂತೆ, ದೇವರು ತನಗೆ ವಿರುದ್ಧವಾಗಿ ಹಟಮಾರಿತನದಿಂದ ದಂಗೆಯೆದ್ದ ಜನರನ್ನು ಉಳಿಸಲಿಲ್ಲ (2 ಪೇತ್ರ 2:5). ನಾದಾಬ ಮತ್ತು ಅಬೀಹು ಅವರನ್ನು ಬೆಂಕಿಯಿಂದ ಕೊಂದದ್ದರಲ್ಲಿ (ಯಾಜಕಕಾಂಡ 10:1-3) ಮತ್ತು ಹಳೇ ಒಡಂಬಡಿಕೆಯಲ್ಲಿ ವಿವರಿಸಲ್ಪಟ್ಟ ಇತರ ಘಟನೆಗಳಲ್ಲಿ ದೇವರ ತೀಕ್ಷ್ಣತೆಯನ್ನು ನೋಡ ಬಹುದು.

ದೇವರ ದಯೆಯು ಹೊಸ ಒಡಂಬಡಿಕೆಯಲ್ಲಿ ಪೇತ್ರನೊಂದಿಗೆ (ಲೂಕ 22:31, 32), ಪೌಲನೊಂದಿಗೆ (1 ತಿಮೊಥೆ 1:15, 16) ಹಾಗೂ ಇತರರೊಂದಿಗೆ ವರ್ತಿಸಿದ್ದರಲ್ಲಿ ಚಿತ್ರಿಸಲ್ಪಟ್ಟಿದೆ. ಆತನ ರೋಷವು ಅನನೀಯ ಮತ್ತು ಸಫೈರರ ಮರಣದಲ್ಲಿ (ಅಪೊಸ್ತಲರ ಕೃತ್ಯ 5:1-10) ಮತ್ತು ಹೆರೋದನ ಮರಣದಲ್ಲಿ (ಅಪೊಸ್ತಲರ ಕೃತ್ಯ 12:20-23) ಕಂಡು ಬರುತ್ತದೆ. ಅವರ ತಪ್ಪುಕಾರ್ಯಗಳಿಗಾಗಿ ದೇವರು ಈ ಜನರನ್ನು ಸಾಯುವಂತೆ ಬಡಿದನು.

ಅವಿಧೇಯರೊಂದಿಗಿನ ದೇವರ ನಡವಳಿಕೆಯು ಆತನು ಅತೀ ಕಠಿಣವಾದ ಶಿಕ್ಷೆಕೊಡಲು ಶಕ್ತನೆಂಬುದನ್ನು ತೋರಿಸುತ್ತದೆ. ದೇವರು ಕೇವಲ ಪ್ರೀತಿಯಂತೆ ನೋಡುವವರು, ಪಾಪದಕಡೆಗೆ ಆತನ ತೀವ್ರ ಕೋಪವನ್ನೂ ಮತ್ತು ಆತನ ಚಿತ್ತಕ್ಕೆ ಸಮರ್ಪಿಸಿಕೊಳ್ಳದವರಿಗೆ ಆತನು ಕೊಡುವ ಶಿಕ್ಷೆಯನ್ನೂ ಕಡೆಗಣಿಸುತ್ತಾರೆ.

## ದೇವರ ದೃಷ್ಟಿಕೋನ

ದೇವರು ನಿತ್ಯವಾಗಿ ನೀತಿವಂತರಿಗೆ ಬಹುಮಾನವನ್ನೂ ಅನೀತಿವಂತರಿಗೆ ದಂಡನೆಯನ್ನೂ ಕೊಡುವನೋ? "ನಿತ್ಯವಾದ" ಎಂಬುದು ಬಹುಮಾನದ ಅವಧಿಗೆ ಮಾತ್ರ ಸಂಬಂಧಿಸಿ, ಶಿಕ್ಷೆಯ ಅವಧಿಗೆ ಸಂಬಂಧಿಸಿರುವದಿಲ್ಲವೋ? (ನೋಡಿರಿ ಮತ್ತಾಯ 25:46.) ನಿತ್ಯ ಶಿಕ್ಷೆಯು ಸುಮ್ಮನೇ ಸಭೆಯ ಸಾಂಪ್ರದಾಯವಾಗಿದ್ದು, ಬೈಬಲಿನ ಬೋಧನೆಯಾಗಿರುವದಿಲ್ಲ ಅಲ್ಲವೇ? ಮನುಷ್ಯನ ಬಹುಮಾನದ ಅವಧಿ ಮತ್ತು ದಂಡನೆಯ ಅವಧಿಯ ಬಗ್ಗೆ ಕಲಿತು ಕೊಳ್ಳಲು ನಮಗೆ ಅತ್ಯುತ್ತಮ ಮಾರ್ಗವು ದೇವರ ಪ್ರಕಟಣೆಯೊಳಗೆ ನೋಡುವುದು ಮತ್ತು ಆತನು ಅವರ ಬಗ್ಗೆ ಏನು ಹೇಳಿದ್ದಾನೆ ಎಂಬುದನ್ನು ಕಂಡು ಕೊಳ್ಳುವುದು ಆಗಿದೆ. ದೇವರು ನಮಗೆ ಬೋಧಿಸುವುದೆಲ್ಲವೂ ಸರಿಯಾದದ್ದಾಗಿದೆ.

ಮೂರು ಭಾಷೆಯ ಮೇಲೆ ಅವಲಂಬಿಸಿ, ಬೈಬಲಿನಲ್ಲಿ ಬೋಧಿಸಿದಂತೆ ಬಹುಮಾನದ ಮತ್ತು ಶಿಕ್ಷೆಯ ಅವದಿಯನ್ನು ನಾವು ಸುಲಭವಾಗಿ ನಿರ್ಧರಿಸಬಲ್ಲೆವು. ಅವೆರಡೂ ಸದಾಕಾಲಕ್ಕೂ ಇರುವವೆಂದು ಹೇಳಲ್ಪಟ್ಟಿದೆ.

*Olam* ಎಂಬ ಇಬ್ರಿಯ ಪದವು "ಎಂದೂ ಅಂತ್ಯವಿಲ್ಲದ್ದು" ಎಂಬ ಅರ್ಥವನ್ನು ಅವಶ್ಯಕವಾಗಿ ಕೊಡುವದಿಲ್ಲ ಆದರೆ "ಸಹಿಸುವುದು" ಇಲ್ಲವೇ "ಯುಗ - ಸಹಿಷ್ಣುತೆ" ಅಥವಾ "ಅಸ್ತಿತ್ವದಲ್ಲಿರುವಂತೆ ಮುಂದುವರಿ"[2] ಎಂದು ಸಾಮಾನ್ಯವಾಗಿ ಅರ್ಥವಾಗುತ್ತದೆ. ಯಾವುದಾದರೂ ಮಿತಿಯುಳ್ಳ ಸಮಯಕ್ಕೆ ಅಸ್ತಿತ್ವದಲ್ಲಿರುವದೆಂದು ಇಲ್ಲವೇ ನಿತ್ಯತ್ವದಲ್ಲೆಲ್ಲಾ

ಇರುವುದೆಂದು ಹೇಳಬೇಕಾದರೆ, ಸಂದರ್ಭಗಳನ್ನು ಇಲ್ಲವೇ ಇತರ ಪರಿಶುದ್ಧ ಬರಹಗಳನ್ನು ನಾವು ನಿರ್ಧರಿಸಬೇಕಾಗುತ್ತದೆ. ಬಹುಮಾನಕ್ಕೆ ಮತ್ತು ಶಿಕ್ಷೆಗೆ ಸಂಬಂಧಿಸಿ, ಹಳೇ ಒಡಂಬಡಿಕೆಯ, ದಾನಿಯೇಲ 12:2 ವಾಕ್ಯಭಾಗದಲ್ಲಿ ಮಾತ್ರ *olam* ಎಂಬುದು ಉಪಯೋಗಿಸಲ್ಪಟ್ಟಿದೆ. "ದೂಳಿನ ನೆಲದೊಳಗೆ ದೀರ್ಘನಿದ್ರೆ ಮಾಡುವವರಲ್ಲಿ ಅನೇಕರು ಎಚ್ಚತ್ತು ಕೆಲವರು ನಿತ್ಯಜೀವವನ್ನು, ಕೆಲವರು ನಿಂದನ ನಿತ್ಯ ತಿರಸ್ಕಾರಗಳನ್ನು ಅನುಭವಿಸುವರು." ಈ ವಚನವನ್ನು "ಯುಗ-ಒಳಗೊಂಡಿರುವ"ದನ್ನು ಅರ್ಥಮಾಡಲು ವ್ಯಾಕ್ಯಾನಿಸಬಹುದು; ಹಾಗಿದ್ದರೂ, ಹೊಸ ಒಡಂಬಡಿಕೆಯು ಇವೆಲ್ಲವೂ ಸದಾಕಾಲಕ್ಕೂ ಇರುವವೆಂದು ಬೋಧಿಸುವದಾದರೆ, ಈ ವಾಕ್ಯವು ಅದೇ ರೀತಿಯಲ್ಲಿ ವ್ಯಾಖ್ಯಾನಿಸಲ್ಪಡತಕ್ಕದ್ದು.

*Aion*[3] ಎಂಬ ಗ್ರೀಕ ಪದವು "ಯುಗ," ಸಮಯದ ಒಂದು ಅವಧಿ ಎಂದು (ಮತ್ತಾಯ 28:20), "ಯುಗದೊಳಗೆ" ಎಂಥರ್ಥವುಳ್ಳ *eis* ಎಂಬುದು ಮೊದಲು ಬರುವಾಗ ಹೊರತುಪಡಿಸಿ, ಯೋಚಿಸತಕ್ಕದ್ದು. ಇದು ಸಂಭವಿಸುವಾಗ, ಅದು "ಎಂದೆಂದಿಗೂ" ಎಂದು ಭಾಷಾಂತರಿಸಲ್ಪಡತಕ್ಕದ್ದು (ಮತ್ತಾಯ 6:13; 21:19 [KJV]; ಲೂಕ 1:33, 55). ಪುನಃ ಪುನಃ ಬರುವಾಗ (*eis tous aionas tov aionas*; ಅಕ್ಷರಶಃ "ಯುಗಯುಗಾಂತರಗಳಲ್ಲಿ"), ಅದು "ಎಂದೆಂದಿಗೂ ಎಂದೆಂದಿಗೂ" ಎಂದು ಭಾಷಾಂತರಿಸಲ್ಪಡತಕ್ಕದ್ದು (ಫಿಲಿಪ್ಪಿ 4:20; 1 ತಿಮೊಥೆ 1:17) *aionios* ಎಂಬ ಪದವು ಯಾವಾಗಲೂ ಸದಾಕಾಲ ಇರುವಂಥದ್ದಕ್ಕೆ ಇಲ್ಲವೇ ನಿತ್ಯವಾದದ್ದಕ್ಕೆ ಸಂಬಂಧಿಸಿರುತ್ತದೆ ಮತ್ತು ಅದು ಹಾಗೆ ಹೆಚ್ಚಾದ ಅವೃತ್ತಿಗಳಲ್ಲಿ ಭಾಷಾಂತರಿಸಲ್ಪಟ್ಟಿದೆ (ಮತ್ತಾಯ 18:8; 19:16, 29).[4]

ಈ ಕೆಳಗಿನ ವಚನಗಳಲ್ಲಿ *aion* ಎಂಬುದು, *eis* ಎಂಬುದನ್ನು ಅನುಸರಿಸಿ, "ಎಂದೆಂದಿಗೂ," ಅಕ್ಷರಶಃವಾಗಿ "ಯುಗದೊಳಗೆ" ಎಂದು ಭಾಷಾಂತರಿಸಲ್ಪಟ್ಟಿದೆ ಮತ್ತು ನಮ್ಮ ಮುಂದಿನ ಬಹುಮಾನ ಇಲ್ಲವೇ ಶಿಕ್ಷೆಗೆ ಸಂಬಂಧಿಸಿ ಉಪಯೋಗಿಸಲ್ಪಟ್ಟಿದೆ:

> "ಈ ರೊಟ್ಟಿಯನ್ನು ಯಾವನಾದರೂ ತಿಂದರೆ ಅವನು ಸದಾಕಾಲ ಬದುಕುವನು" (ಯೋಹಾನ 6:51; ನೋಡಿರಿ 6:58).
>
> "ಯಾವನಾದರೂ ನನ್ನ ವಾಕ್ಯವನ್ನು ಕೈಕೊಂಡು ನಡೆದರೆ ಅವನು [ಎಂದಿಗೂ] ಸಾವನ್ನು ಕಾಣುವದಿಲ್ಲ" (ಯೋಹಾನ 8:51, 52).
>
> "ಅವು [ಎಂದಿಗೂ] ನಾಶವಾಗುವದೇ ಇಲ್ಲ" (ಯೋಹಾನ 10:28).
>
> "ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನು [ಎಂದಿಗೂ] ಸಾಯುವದಿಲ್ಲ" (ಯೋಹಾನ 11:26).
>
> "ದೇವರ ಚಿತ್ತವನ್ನು ನೆರವೇರಿಸುವವನು ಎಂದೆಂದಿಗೂ ಇರುವನು" (1 ಯೋಹಾನ 2:17).
>
> "ಇವರ ಪಾಲಿಗೆ ಕಾರ್ಗತ್ತಲೆಯು ಸದಾಕಾಲ ಇಟ್ಟಿರುವುದು" (ಯೂದ 13ಬಿ). (*Aion* ಎಂಬುದು 2 ಪೇತ್ರ 2:17 ಪುರಾತನ ಕೈಬರಹ ಪ್ರತಿಗಳಲ್ಲಿ ಕಂಡುಬರುವದಿಲ್ಲ. ಇದು ಯೂದ 13ಕ್ಕೆ ಸಾಮಾಂತರವಾಗಿದೆ.)

ಕೆಲವು ವಚನಗಳಲ್ಲಿ *aion* ಎಂಬುದು, *eis*ದಿಂದ ಹಿಂಬಾಲಿಸಿ, ಪುನಃ ಹೇಳಲ್ಪಟ್ಟಿದೆ ಮತ್ತು ಆದುದರಿಂದ, "ಯುಗಯುಗಾಂತರಗಳಲ್ಲಿ" ಎಂದು ಮುಂದಿನ ಬಹುಮಾನ ಇಲ್ಲವೇ ಶಿಕ್ಷೆಗೆ ಸಂಬಂಧಿಸಿ ಭಾಷಾಂತರಿಸಲ್ಪಟ್ಟಿದೆ:

> ಅಂಥವರ ಯಾತನೆಯ ಹೊಗೆಯು ಯುಗಯುಗಾಂತರಗಳಲ್ಲಿಯೂ ಏರುತ್ತಾ ಹೋಗುತ್ತದೆ (ಪ್ರಕಟನೆ 14:11).
>
> ಅವರು ಹಗಲಿರುಳು ಯುಗಯುಗಾಂತರಗಳಲ್ಲಿಯೂ ಯಾತನೆ ಪಡುತ್ತಿರುವರು (ಪ್ರಕಟನೆ 20:10).
>
> ಅವರು ಯುಗಯುಗಾಂತರಗಳಲ್ಲಿಯೂ ಆಳುವರು (ಪ್ರಕಟನೆ 22:5).

*Aionios* ಎಂಬುದು ಮುಂದಿನ ಬಹುಮಾನ ಇಲ್ಲವೇ ಶಿಕ್ಷೆಗೆ ಸಂಬಂಧಿಸಿ ಈ ವಚನಗಳಲ್ಲಿ ಉಪಯೋಗಿಸಲ್ಪಟ್ಟಿದೆ ಮತ್ತು "ನಿತ್ಯ" ಇಲ್ಲವೇ "ನಿತ್ಯವಾದ" ಎಂದು ಭಾಷಾಂತರಿಸಲ್ಪಟ್ಟಿದೆ:

> "ಎರಡು ಕೈ ಎರಡು ಕಾಲು ಉಳ್ಳವನಾಗಿದ್ದು ನಿತ್ಯವಾಗಿರು ಬೆಂಕಿಯಲ್ಲಿ ಹಾಕಿಸಿಕೊಳ್ಳುವದಕ್ಕಿಂತ ಕೈಕಾಲು ಕಳಕೊಂಡವನಾಗಿ ಜೀವದಲ್ಲಿ ಸೇರುವದು ನಿನಗೆ ಉತ್ತಮ" (ಮತ್ತಾಯ 18:8).
>
> "... ಬಿಟ್ಟುಬಿಟ್ಟಿರುವವರೆಲ್ಲರು ... ನಿತ್ಯಜೀವಕ್ಕೆ ಬಾಧ್ಯರಾಗುವರು" (ಮತ್ತಾಯ 19:29; ನೋಡಿರಿ ಮಾರ್ಕ 10:30; ಲೂಕ 18:30).
>
> "ಶಾಪಗ್ರಸ್ತರೇ, ನನ್ನನ್ನು ಬಿಟ್ಟು ಪಿಶಾಚನಿಗೂ ಅವನ ದೂತರಿಗೂ ಸಿದ್ಧ ಮಾಡಿರುವ ನಿತ್ಯ ಬೆಂಕಿಯೊಳಕ್ಕೆ ಹೋಗಿರಿ" (ಮತ್ತಾಯ 25:41).
>
> "ಮತ್ತು ಇವರು ನಿತ್ಯಶಿಕ್ಷೆಗೂ ನೀತಿವಂತರು ನಿತ್ಯಜೀವಕ್ಕೂ ಹೋಗುವರು" (ಮತ್ತಾಯ 25:46).
>
> ಕ್ಷಣ ಮಾತ್ರವಿರುವ ನಮ್ಮ ಹಗುರವಾದ ಸಂಕಟವು ಅತ್ಯಂತಾಧಿಕವಾದ ಪ್ರತಿಫಲವನ್ನು ಉಂಟುಮಾಡಿ ನಮಗೆ ನಿರಂತರವಾಗಿರುವ ಗೌರವವಾದ ಪ್ರಭಾವವನ್ನು ದೊರಕಿಸುತ್ತದೆ (2 ಕೊರಿಂಥ 4:17).
>
> ದೇವರಿಂದುಂಟಾದ ಒಂದು ಕಟ್ಟಡವು ಪರಲೋಕದಲ್ಲಿ ನಮಗುಂಟೆಂದು ಬಲ್ಲೆವು. ಅದು ಕೈಯಿಂದ ಕಟ್ಟಿದ ಮನೆಯಾಗಿರದೆ ನಿತ್ಯವಾಗಿರುವಂಥದಾಗಿದೆ (2 ಕೊರಿಂಥ 5:1).
>
> ಅಂಥವರು ... ನಿತ್ಯನಾಶನವೆಂಬ ದಂಡನೆಯನ್ನು ಅನುಭವಿಸುವರು (2 ಥೆಸಲೊನೀಕ 1:9).
>
> ... ಕ್ರಿಸ್ತ ಯೇಸುವಿನಲ್ಲಿರು ರಕ್ಷಣೆಯನ್ನು ನಿತ್ಯಪ್ರಭಾವ ಸಹಿತವಾಗಿ ಹೊಂದ

ಬೇಕೆಂದು ... (2 ತಿಮೊಥೆ 2:10; ನೋಡಿರಿ 1 ಪೇತ್ರ 5:10).

ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನ ನಿತ್ಯ ರಾಜ್ಯದಲ್ಲಿ ಪ್ರವೇಶಿಸುವ ಹಾಗೆ ದೇವರು ನಿಮಗೆ ಧಾರಾಳವಾಗಿ ಅನುಗ್ರಹಿಸುವನು (2 ಪೇತ್ರ 1:11).

"ನಿತ್ಯವಾದ ನ್ಯಾಯತೀರ್ಪು" (ಇಬ್ರಿಯ 6:2), "ನಿತ್ಯವಿಮೋಚನೆ" (ಇಬ್ರಿಯ 9:12) ಮತ್ತು "ನಿತ್ಯ ಬಾಧ್ಯತೆ" (ಇಬ್ರಿಯ 9:15) ಎಂಬುದರ ಬಗ್ಗೆಯು ನಾವು ಓದುವೆವು.[5]

ಹಿಂದಿರುವ ವಾಕ್ಯಭಾಗಗಳನ್ನು ಗಮನವಿಟ್ಟು ಪರೀಕ್ಷಿಸುವಾಗ ನೀತಿವಂತರಿಗೆ ದೊರಕುವ ಬಹುಮಾನದ ಅವಧಿಯು ಅನೀತಿವಂತರಿಗೆ ದೊರೆಯುವ ಶಿಕ್ಷೆಯ ಅವಧಿಯು ಒಂದೇಯಾಗಿರುವದೆಂದು ನಮಗೆ ಪ್ರಕಟಿಸುತ್ತದೆ. ನೀತಿವಂತರು ಸದಾಕಾಲಕ್ಕೂ ಬಹುಮಾನ ಹೊಂದಿದರೆ, ಅನೀತಿವಂತರೂ ಸದಾಕಾಲಕ್ಕೂ ದಂಡಿಸಲ್ಪಡುವರು. ನೀತಿವಂತರು ತಮ್ಮೊಂದಿಗೆ ಪರಲೋಕದಲ್ಲಿ ನಿತ್ಯವಾಗಿ ಇರುವರೆಂದು ದೇವರು ವಾಗ್ದಾನ ಮಾಡಿದಂತೆಯೇ, ಅನೀತಿವಂತರೂ ನಿತ್ಯವಾಗಿ ಶಿಕ್ಷಿಸಲ್ಪಡುವರೆಂದೂ ಆತನು ವಾಗ್ದಾನ ಮಾಡಿದ್ದಾನೆ.

ಸೈತಾನನೂ ಅವನ ದೂತರೂ ಹೊಂದುವಂಥ ಶಿಕ್ಷೆಯನ್ನೆ ದುಷ್ಟರು ಹೊಂದಿಕೊಳ್ಳುವರು (ಮತ್ತಾಯ 25:41), ಸೈತಾನನು ಮೃಗ ಮತ್ತು ಸುಳ್ಳು ಪ್ರವಾದಿಯೊಂದಿಗೆ, "ಹಗಲಿರುಳೂ ಯುಗಯುಗಾಂತರಗಳಲ್ಲಿಯೂ ಯಾತನೆ ಪಡುತ್ತಿರುವರು" ಎಂದು ಪ್ರಕಟನೆ 20:10 ಹೇಳುತ್ತದೆ. ಈ ವಚನವು ಯಾತನೆಯು ಸದಾಕಾಲಕ್ಕೂ ಇರುವುದು ಎಂದು ಹೇಳಿದ್ದರೆ, ಅದು ಶಿಕ್ಷೆಯ ಕಾಲಾವಧಿಯನ್ನು ಸೂಚಿಸಲಿಕ್ಕೆ ಸಾಗುತ್ತಿತ್ತು; ಆದರೆ "ಹಗಲು ಮತ್ತು ಇರುಳು" (ಪ್ರಕಟನೆ 22:5ರ ಪ್ರಕಾರ ಹಗಲು ರಾತ್ರಿ ಇನ್ನು ಮುಂದೆ ಅಸ್ತಿತ್ವದಲ್ಲಿ ಇರುವದಿಲ್ಲ) ಎಂಬುದನ್ನು ಕೂಡಿಸಿದ್ದು ಶಿಕ್ಷೆಯು ಸತತವಾದದ್ದಾಗಿರುವುದು ಮತ್ತು ನಿತ್ಯವಾದ ಶಿಕ್ಷೆಯಾಗಿರುವುದು ಎಂಬುದನ್ನು ಒತ್ತಿ ಹೇಳುವದಕ್ಕಾಗಿ ಇರುತ್ತದೆ.

ಸೊದೋಮ ಮತ್ತು ಗೊಮೋರದ ನಾಶನವನ್ನು "ನಿತ್ಯವಾದ ಬೆಂಕಿಯ" ಉದಾಹರಣೆಯಂತೆ ಯೂದನು ಕೊಟ್ಟಿರುವದರಿಂದ (ಯೂದ 7), "ನಿತ್ಯಬೆಂಕಿ" ಎಂಬ ವ್ಯಕ್ತಪಡಿಸುವಿಕೆಯ ಅರ್ಥ ಸರ್ವನಾಶ (ನಿರ್ಮೂಲ) ಎಂದಾಗುವುದೆಂದು ಕೆಲವರು ತೀರ್ಮಾನಿಸುತ್ತಾರೆ. ಈ ಮಾತು ಬೆಂಕಿಯ ಅವಧಿಗೆ ಬದಲು ಪರಿಣಾಮಕ್ಕೆ ಅನ್ವಯಿಸಬೇಕೆಂದು ಅವರು ನಂಬುತ್ತಾರೆ. ಈ ನಿರ್ಧಾರದೊಂದಿಗೆ ಸಮಸ್ಯೆಯು ಸೊದೋಮ ಮತ್ತು ಗೊಮೋರಗಳಲ್ಲಿದ್ದವರ ನಾಶನವು ನಿತ್ಯಕಾಲಕ್ಕಾಗಿರುವದಿಲ್ಲ ಎಂಬುದು (ಆದಿಕಾಂಡ 19:27-29). "ನ್ಯಾಯವಿಚಾರಣೆಯ ದಿವಸದಲ್ಲಿ ಅಂಥ ಊರಿನ ಗತಿಯು ಸೊದೋಮ್ ಗೊಮೋರಗಳ ಸೀಮೆಯ ಗತಿಗಿಂತಲೂ ಕಠಿಣವಾಗಿರುವುದು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" ಎಂದು ಯೇಸು ಹೇಳಿದನು (ಮತ್ತಾಯ 10:15). ಸೊದೋಮ್ ಮತ್ತು ಗೊಮೋರದ ನಾಡಿನ ಜನರು ನ್ಯಾಯತೀರ್ವಿಕೆಯ ದಿನದಂದು ಯೇಸುವಿನ ಮುಂದೆ ಕಂಡು ಕೊಂಡರೆ, ಆಗ, "ನಿತ್ಯ ಬೆಂಕಿಯು" ಅವರನ್ನು ಸಂಪೂರ್ಣವಾಗಿ ನಾಶಗೊಳಿಸಿರಲಿಲ್ಲ, ಆದರೆ ಅವರನ್ನು ಹಾಳುಬಿದ್ದ ಅವಸ್ಥೆಗೆ ತಂದಿತ್ತು, ಮುಂದಿನ ಪಾಠದಲ್ಲಿ ದುಷ್ಟರ ದಂಡನೆಯ ಸ್ವರೂಪವನ್ನು ಯೋಚಿಸುವೆವು ಮತ್ತು "ನಾಶಪಡಿಸು" ಮತ್ತು "ನಾಶನ" ಎಂಬುದರ ಅರ್ಥವನ್ನು ಪರೀಕ್ಷಿಸುವೆವು. ಸೊದೋಮ್ ಮತ್ತು ಗೊಮೋರಗಳನ್ನು ನಾಶಪಡಿಸಿದ ನಿತ್ಯಬೆಂಕಿಯು ಎರಡು ವಿಧಗಳಲ್ಲಿ ಒಂದು ಉದಾಹರಣೆಯಾಗಿದೆ; (1) ದೇವರು ದುಷ್ಟರನ್ನು ದಂಡಿಸುವನೆಂದು ಅದು ತೋರಿಸುತ್ತದೆ, ಮತ್ತು (2) ದೇವರು ಕೊಡುವ

ಶಿಕ್ಷೆಯ ತೀಕ್ಷಣತೆಯನ್ನು ಅದು ಸೂಚಿಸುತ್ತದೆ.[6]

## ಮುಕ್ತಾಯ

ತನಗೆ ವಿಧೇಯರಾಗದವರನ್ನು ದೇವರು ಸದಾಕಾಲವೂ ದಂಡಿಸುವನೆಂಬ ಯೋಚನೆಯು ಭಯಾನಕವಾದದ್ದಾಗಿದೆ. ಆದರೆ ಬೋಧನೆಯು ಆತನ ವಾಕ್ಯವಾಗಿರುತ್ತದೆ. ನೀತಿ ವಂತರ ಆಶೀರ್ವಾದಗಳಂತೆಯೇ ಅನೀತಿವಂತರ ಶಿಕ್ಷೆಯು ನಿತ್ಯವಾದದ್ದಾಗಿರುತ್ತದೆ. ಈ ನಿಶ್ಚತತೆಯು ನಾವು ಮಾಡುವ ಪ್ರತಿಯೊಂದರಲ್ಲಿಯೂ ದೇವರನ್ನು ಮೆಚ್ಚಿಸಲಿಕ್ಕೆನಮ್ಮನ್ನು ಪ್ರೋತ್ಸಾಹಿಸತಕ್ಕದ್ದು. ಪರಲೋಕದಲ್ಲಿ ಆತನೊಂದಿಗೆ ನಿತ್ಯತ್ವವನ್ನು ಹೊಂದಿಕೊಂಡರೆ ಮತ್ತು ಸೈತಾನನೊಂದಿನ ಹಾಗೂ ಅವನ ದೂತರುಗಳೊಂದಿಗೆ ನಿತ್ಯವಾದ ಬೆಂಕಿಯನ್ನು ತಪ್ಪಿಸಿಕೊಂಡರೆ ಪ್ರತಿಯೊಂದು ಪ್ರಯತ್ನ, ಪ್ರತಿಯೊಂದು ಕಠಿಣ ಕೆಲಸ, ಸೇವೆಯ ಪ್ರತಿಯೊಂದು ನಿಮಿಷವು ಪ್ರಯೋಜನಕಾರಿಯಾದದ್ದಾಗುವುದು.

---

ಟಿಪ್ಪಣಿಗಳು

[1]ರೋಮಾಪುರ 1:18; 2:8; 3:5; 12:19; ಎಫೆಸ 5:6; ಕೊಲೊಸ್ಸೆ 3:6; 2 ಥೆಸಲೊನೀಕ 1:8. [2]"ಆಕಾಶ ಮಂಡಲದ ಮತ್ತು ಭೂಮಿಯ ಅಂತಿಮ ಸ್ಥಿತಿ" ಎಂಬ ಪಾಠದಲ್ಲಿ *olam*ದ ಚರ್ಚೆ ನೋಡಿರಿ. [3]*Aion* ಎಂಬುದು KJVಯಲ್ಲಿ ಕೆಲವು ಸಲ "ಜಗತ್ತು" ಎಂದು ಭಾಷಾಂತರಿಸಲ್ಪಟ್ಟಿದೆ (ಮತ್ತಾಯ 12:32; 13:22), ಆದರೆ *"age"* ಎಂಬುದು ಹೆಚ್ಚು ಇತ್ತೀಚಿಗಿನ ಅವೃತ್ತಿಗಳಲ್ಲಿರುತ್ತದೆ. [4]KJVಯು *aion*ಗಾಗಿ "age" ಎಂಬುದರ ಬದಲು "world" ಎಂಬುದನ್ನು ಉಪಯೋಗಿಸುತ್ತದೆ. "World" ಎಂಬ ಅರ್ಥವುಳ್ಳ *kosmos* ದೊಂದಿಗೆ ಇದು ಕೆಲವರಲ್ಲಿ ಗಲಿಬಿಲಿ ಹುಟ್ಟಿಸಬಹುದು. [5]"ನಿತ್ಯಜೀವದ" ಚರ್ಚೆಗಾಗಿ "ನೀತಿವಂತರ ಬಹುಮಾನ" ಎಂಬ ಪಾಠವನ್ನು ನೋಡಿರಿ. [6]"ನಿತ್ಯಜೀವದ" ಬಗ್ಗೆ ಈ ಪಾಠದಲ್ಲಿ ಚರ್ಚೆ ಇಲ್ಲದಿರುವುದು ವಿಚಿತ್ರವಾಗಿ ತೋರಬಹುದು; ಹೀಗಿದ್ದರೂ ವ್ಯಕ್ತ ಪಡಿಸುವಿಕೆಗೆ ಮೊತ್ತದೊಂದಿಗೆ ಇರುವಂತೆ - ಗುಣದೊಂದಿಗೂ ಮಾಡಲು ಹೆಚ್ಚು ಇರುವುದು. ಆದುದರಿಂದ, ಚರ್ಚೆಯು ಅನಂತರದ ಅಧ್ಯಯನಕ್ಕಾಗಿ ದಲಿಸಲ್ಪಟ್ಟಿರುವುದು.

© 2009 Truth for Today